ಕರ್ನಾಟಕ ಸರ್ಕಾರ
ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು–560 003

E-Mail Id: adpigsection@gmail.com  Phone No: 080-23460525

ಸಂಖ್ಯೆ: ಕ್ಯೂ5/ಕೆ.ಓ.ಎಸ್/ಪರೀಕ್ಷೆ/ಜೂನ್ 2021/40/2020-21  ದಿನಾಂಕ:04/02/2021

# ಅಧಿಸೂಚನೆ

**ವಿಷಯ:** ಜೂನ್–2021ರ ಮಾಹೆಯಲ್ಲಿ ನಡೆಯಲಿರುವ ಕರ್ನಾಟಕ ಮುಕ್ತ ಶಾಲೆ–ಕೆ.ಓ.ಎಸ್ ಪರೀಕ್ಷೆಗೆ ರಾಜ್ಯದ ಕರ್ನಾಟಕ ಮುಕ್ತ ಶಾಲೆ–ಕೆ.ಓ.ಎಸ್ ಕಲಿಕಾ ಕೇಂದ್ರಗಳಿಂದ ಪರೀಕ್ಷಾ ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ:ಇಡಿ.73.ಎಸ್.ಎಲ್.ಬಿ.2006; ದಿನಾಂಕ:06.09.2006.
2. ಸರ್ಕಾರದ ಆದೇಶ ಸಂಖ್ಯೆ: ಇಡಿ.209.ಎಸ್.ಎಲ್.ಬಿ.2013; ದಿನಾಂಕ:06.12.2014.
3. ಸರ್ಕಾರದ ಆದೇಶ ಸಂಖ್ಯೆ: ಇಡಿ.218/ಎಸ್,ಎಲ್,ಬಿ2016; ದಿನಾಂಕ:14.12.2016.

**********

ಕರ್ನಾಟಕ ಮುಕ್ತ ಶಾಲೆ–ಕೆ.ಓ.ಎಸ್ ಪರೀಕ್ಷೆಯನ್ನು ಜೂನ್–2021ರ ಮಾಹೆಯಲ್ಲಿ ದಿನಾಂಕ:14.06.2021 ರಿಂದ ದಿನಾಂಕ:25/06/2021 ರವರೆಗೆ ನಡೆಸಲು ಮಂಡಳಿಯು ನಿರ್ಧರಿಸಿ ಪರೀಕ್ಷಾ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಕರ್ನಾಟಕ ಮುಕ್ತ ಶಾಲೆ–ಕೆ.ಓ.ಎಸ್ ಪರೀಕ್ಷೆಗೆ ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಹಾಗೂ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ), ಬೆಂಗಳೂರು ಇವರ ವತಿಯಿಂದ ನಡೆಸಲ್ಪಡುತ್ತಿರುವ ರಾಜ್ಯದ ಎಲ್ಲಾ ಕರ್ನಾಟಕ ಮುಕ್ತ ಶಾಲೆ–ಕೆ.ಓ.ಎಸ್ ಕಲಿಕಾ ಕೇಂದ್ರಗಳಿಂದ ಹೊಸ ವಿದ್ಯಾರ್ಥಿಗಳು ಮತ್ತು ಪುನರಾವರ್ತಿತ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ತಮ್ಮ ಸಂಸ್ಥೆಯ ಲಾಗಿನ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

## I. ಪರೀಕ್ಷೆ ತೆಗೆದುಕೊಳ್ಳಲು ಅರ್ಹತೆಗಳು:-

1. ವಿದ್ಯಾರ್ಥಿಗಳು ಏಳನೇ ತರಗತಿಯವರೆಗೆ ಓದಿರಬೇಕು (ಏಳನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣ/ಅನುತ್ತೀರ್ಣ).
2. ಮಂಡಳಿಯು ಮಂಜೂರಾತಿ ನೀಡಿದ ಪರೀಕ್ಷಾ ಕೇಂದ್ರಗಳಲ್ಲಿ ಮಾತ್ರ ಪರೀಕ್ಷೆ ನಡೆಸಲಾಗುವುದು. ಅವಶ್ಯಕವಿದ್ದಲ್ಲಿ ಪರೀಕ್ಷಾ ಕೇಂದ್ರಗಳನ್ನು ಬದಲಾಯಿಸುವ ಅಧಿಕಾರ ಮಂಡಳಿಗೆ ಇದೆ.
3. ಸರ್ಕಾರದ ಆದೇಶ ಸಂಖ್ಯೆ:ಇಡಿ.209.ಎಸ್.ಎಲ್.ಬಿ2013 ದಿನಾಂಕ:06.12.2014ರನ್ವಯ ಕರ್ನಾಟಕ ಮುಕ್ತ ಶಾಲೆ–ಕೆ.ಓ.ಎಸ್ ಪರೀಕ್ಷೆಗೆ ನೋಂದಣಿಯಾಗುವವರಿಗೆ **ಶೈಕ್ಷಣಿಕ ವರ್ಷದ ಮಾರ್ಚ್ 1ನೇ ತಾರೀಖಿಗೆ 15 ವರ್ಷ ವಯೋಮಿತಿ ಪೂರ್ಣಗೊಂಡಿರಬೇಕು. ಅಂತಹವರು ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ. ಅಂದರೆ**

**ಜೂನ್–2021ರ ಕರ್ನಾಟಕ ಮುಕ್ತ ಶಾಲೆ–ಕೆ.ಓ.ಎಸ್ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ 01.03.2021ಕ್ಕೆ ಹದಿನೈದು ವರ್ಷಗಳ ವಯೋಮಿತಿ ಪೂರ್ಣಗೊಂಡಿರಬೇಕು.**

4. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ (ಡಿಬಾರ್ ಆದ) ವಿದ್ಯಾರ್ಥಿಗಳನ್ನು ನೋಂದಾಯಿಸಬಾರದು. ಅಂತಹ ವಿದ್ಯಾರ್ಥಿಗಳನ್ನು ನೋಂದಾಯಿಸಿಕೊಂಡಿದ್ದು ಮಂಡಳಿಯ ಗಮನಕ್ಕೆ ಬಂದಲ್ಲಿ ಅಂತಹ ಕಲಿಕಾ ಕೇಂದ್ರಗಳ ವಿರುದ್ಧ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.
5. ಕೆ.ಓ.ಎಸ್ ಪರೀಕ್ಷೆಯ ನೋಂದಣಿಗೆ ಸಂಬಂಧಿಸಿದಂತೆ ಅಭ್ಯರ್ಥಿಯು ವಾಸಿಸುತ್ತಿರುವ ಪಟ್ಟಣ/ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಕಲಿಕಾ ಕೇಂದ್ರಗಳಲ್ಲಿಯೇ ನೋಂದಣಿಯಾಗಬೇಕಾಗಿರುತ್ತದೆ. ಈ ಬಗ್ಗೆ ಅಧೀಕೃತ ದಾಖಲೆಯನ್ನು ಪಡೆದು ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು. (ಉದಾ: ಆಧಾರ್ ಕಾರ್ಡ್/ಚುನಾವಣಾ ಗುರುತಿನ ಚೀಟಿ/ಪಡಿತರಚೀಟಿ).

## II. <u>ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.</u>

1. **ಹೊಸ ವಿದ್ಯಾರ್ಥಿಗಳು:–** ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಹಾಗೂ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ), ಬೆಂಗಳೂರು ಇವರಿಂದ ಮಾನ್ಯತೆ ಪಡೆದು ನಡೆಸುತ್ತಿರುವ ಕರ್ನಾಟಕ ಮುಕ್ತ ಶಾಲೆ–ಕೆ.ಓ.ಎಸ್ ಗೆ ಹೊಸದಾಗಿ ನೋಂದಣಿಯಾಗಿ ಪ್ರಥಮ ಬಾರಿಗೆ ಕರ್ನಾಟಕ ಮುಕ್ತ ಶಾಲೆ–ಕೆ.ಓ.ಎಸ್ ಪರೀಕ್ಷೆ ತೆಗೆದುಕೊಳ್ಳುತ್ತಿರುವ ವಿದ್ಯಾರ್ಥಿಗಳಿಗೆ ಸಂಕೇತ–ಆರ್.ಎಫ್ (RF) ಎಂದು ವರ್ಗೀಕರಿಸಿದೆ.

ಮಂಡಳಿಯಿಂದ ನೀಡಲಾಗಿರುವ ಶಾಲಾ ಲಾಗಿನ್‌ಗಳ ಮೂಲಕ ಅಭ್ಯರ್ಥಿಯ ಹೆಸರು, ವಿದ್ಯಾರ್ಥಿಯ ತಂದೆಯ ಹೆಸರು, ತಾಯಿಯ ಹೆಸರು ಮತ್ತು ವಿದ್ಯಾರ್ಥಿಯ ಹುಟ್ಟಿದ ದಿನಾಂಕ ಇತ್ಯಾದಿಗಳನ್ನು 7ನೇ ತರಗತಿಯ ವರ್ಗಾವಣೆ ಪತ್ರದ ಆಧಾರದ ಮೇಲೆ ಕರ್ನಾಟಕ ಮುಕ್ತ ಶಾಲೆ–ಕೆ.ಓ.ಎಸ್ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ದಾಖಲಿಸುವುದು ಕಡ್ಡಾಯವಾಗಿರುತ್ತದೆ. ವಿದ್ಯಾರ್ಥಿಯ ತಾಯಿಯ ಹೆಸರು 7ನೇ ತರಗತಿಯ ಪ್ರಾಥಮಿಕ ಶಾಲಾ ದಾಖಲಾತಿ ವಹಿಯಲ್ಲಿ/ವರ್ಗಾವಣೆ ಪ್ರಮಾಣಪತ್ರದಲ್ಲಿ ಇಲ್ಲದಿದ್ದಲ್ಲಿ ತಹಶೀಲ್ದಾರರಿಂದ ನೀಡಿರುವ ಯಾವುದೇ ಪ್ರಮಾಣ ಪತ್ರದ ಆಧಾರದ ಮೇಲೆ ನಮೂದಿಸುವುದು. ಆ ಆಧಾರದ ಮೇಲೆ ದೃಢೀಕರಿಸಿ ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಹಾಗೂ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ), ಬೆಂಗಳೂರು ಇವರಿಗೆ ಸಲ್ಲಿಸುವುದು. ನಾಮಿನಲ್‌ರೋಲ್‌ನಲ್ಲಿರುವಂತೆ ಕರ್ನಾಟಕ ಮುಕ್ತ ಶಾಲೆ–ಕೆ.ಓ.ಎಸ್ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳು, ಅವರ ಹಂತದಲ್ಲಿ ವಿದ್ಯಾರ್ಥಿಯ ನಿಖರವಾದ ಮಾಹಿತಿಯನ್ನು ಅತಿ ಎಚ್ಚರಿಕೆಯಿಂದ ಮತ್ತು ಜಾಗರೂಕತೆಯಿಂದ ಆನ್‌ಲೈನ್‌ನಲ್ಲಿ ಭರ್ತಿ ಮಾಡಬೇಕು. ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ತಪ್ಪಾಗಿ ಭರ್ತಿ ಮಾಡಿದಲ್ಲಿ ಅಭ್ಯರ್ಥಿಗೆ ತೊಂದರೆಯಾಗುತ್ತದೆ. ಈ ರೀತಿ ತಪ್ಪು ಮಾಡಿದಲ್ಲಿ ಕರ್ನಾಟಕ ಮುಕ್ತ ಶಾಲೆ ಕೆ.ಓ.ಎಸ್ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳಿಗೆ ದಂಡ ವಿಧಿಸಲಾಗುವುದು ಮತ್ತು ತಪ್ಪು ಮಾಹಿತಿ ನೀಡಿದಲ್ಲಿ ಮಂಡಳಿಯ ನಿಯಮಾನುರೀತ್ಯಾ ಕ್ರಮಕೈಗೊಳ್ಳಲಾಗುವುದು.

ಪ್ರಸ್ತುತ ಪರೀಕ್ಷೆಗೆ ಪ್ರಥಮ ಬಾರಿಗೆ ಕುಳಿತುಕೊಳ್ಳುವ ಎಲ್ಲಾ ವಿದ್ಯಾರ್ಥಿಗಳಿಗೆ **ಆರು ವಿಷಯಗಳು ಕಡ್ಡಾಯವಾಗಿದೆ.** ಅವುಗಳಲ್ಲಿ ಪ್ರಥಮ ಭಾಷೆ-ಕನ್ನಡ, ದ್ವಿತೀಯ ಭಾಷೆ ಇಂಗ್ಲೀಷ್ ಹಾಗೂ ತೃತೀಯ ಭಾಷೆ ಹಿಂದಿ ವಿಷಯಗಳು ಕಡ್ಡಾಯವಾಗಿದ್ದು 06 ಕೋರ್ ವಿಷಯಗಳಲ್ಲಿ 03 ವಿಷಯಗಳನ್ನು ಆಯ್ಕೆ ಮಾಡಿಕೊಳ್ಳ ಬಹುದಾಗಿದೆ.

2. **ಪುನರಾವರ್ತಿತ ವಿದ್ಯಾರ್ಥಿಗಳು:-** ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆಯನ್ನು ಬರೆದು ಅನುತ್ತೀರ್ಣ ಹೊಂದಿದ್ದು, ಪುನಃ ಪರೀಕ್ಷೆ ಬರೆಯಲು ಇಚ್ಛಿಸಿರುವ ವಿದ್ಯಾರ್ಥಿಗಳಿಗೆ-ಸಂಕೇತ ಆರ್.ಆರ್ (RR) ಎಂದು ವರ್ಗೀಕರಿಸಿದೆ. ಡಿಸೆಂಬರ್ 2020ರ ಮಾಹೆಯಲ್ಲಿ ನಡೆದ ಪೂರಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸುವಾಗ ನೋಂದಣಿ ಸಂಖ್ಯೆಯನ್ನು ನಮೂದಿಸಿದಾಗ ಅಭ್ಯರ್ಥಿಗಳ (ಎಂ.ಎಸ್.ಎ) ಪೂರಕ ಪರೀಕ್ಷೆಯ ಮಾಹಿತಿಗಳು **AUTO FETCH** ಆಗುತ್ತವೆ.

## III. <u>ಈ ಕೆಳಕಂಡಂತೆ ವಿಷಯ ಹಾಗೂ ವಿಷಯವಾರು ಅಂಕಗಳನ್ನು ನಿಗಧಿಪಡಿಸಲಾಗಿದೆ.</u>

| ಕ್ರಮ ಸಂಖ್ಯೆ | ವಿಷಯ | ವಿಷಯ ಸಂಕೇತ | ಗರಿಷ್ಠ ಅಂಕಗಳು | ಷರಾ |
|---|---|---|---|---|
| 01 | ಪ್ರಥಮ ಭಾಷೆ ಕನ್ನಡ | 208 | 125 | ಕಡ್ಡಾಯ ವಿಷಯಗಳು |
| 02 | ದ್ವಿತೀಯ ಭಾಷೆ ಇಂಗ್ಲೀಷ್ | 202 | 100 | |
| 03 | ತೃತೀಯ ಭಾಷೆ ಹಿಂದಿ | 201 | 100 | |
| | **ಕೋರ್ ವಿಷಯಗಳು** | | | |
| 04 | ಗಣಿತ | 211 | 100 | ಯಾವುದಾದರೂ 03 ವಿಷಯಗಳು |
| 05 | ವಿಜ್ಞಾನ | 212 | 100 | |
| 06 | ಸಮಾಜ ವಿಜ್ಞಾನ | 213 | 100 | |
| 07 | ಅರ್ಥಶಾಸ್ತ್ರ | 214 | 100 | |
| 08 | ವಾಣಿಜ್ಯ ಅಧ್ಯಯನ | 215 | 100 | |
| 09 | ಗೃಹ ವಿಜ್ಞಾನ | 216 | 100 | |

1. ಒಟ್ಟಾರೆ ಮೂರು ಭಾಷೆಗಳು, ಮೂರು ಕೋರ್ ವಿಷಯಗಳನ್ನು ಪ್ರಥಮ ಬಾರಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನಮೂದಿಸಬೇಕು. ಒಮ್ಮೆ ಅಭ್ಯರ್ಥಿಯು ಆಯ್ಕೆ ಮಾಡಿರುವ ವಿಷಯಗಳು ಅಂತಿಮವಾಗಿದ್ದು, ಯಾವುದೇ ಕಾರಣಕ್ಕೂ ಅಭ್ಯರ್ಥಿಯು ವಿಷಯ ಬದಲಾವಣೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಈ ವಿಷಯವನ್ನು ಸಂಬಂಧಿಸಿದ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳು ಅಭ್ಯರ್ಥಿಗಳ ಗಮನಕ್ಕೆ ತರುವುದು.
2. ಪುನರಾವರ್ತಿತ ಅಭ್ಯರ್ಥಿಗಳು ಅನುತ್ತೀರ್ಣ ವಿಷಯಗಳಿಗೆ ಪರೀಕ್ಷೆ ತೆಗೆದುಕೊಳ್ಳಬಹುದಾಗಿದೆ.

## VI . ತೇರ್ಗಡೆ ನಿಯಮಗಳು:–

(i) ಸದರಿ ಪರೀಕ್ಷೆಯನ್ನು ಪ್ರಥಮಬಾರಿಗೆ ತೆಗೆದುಕೊಂಡ ವಿದ್ಯಾರ್ಥಿಯು ಪ್ರಥಮ ಭಾಷೆ–ಕನ್ನಡ 125 ಅಂಕಗಳಿಗೆ ಕನಿಷ್ಠ 38 ಮತ್ತು ಇತರೆ ವಿಷಯಗಳಲ್ಲಿ 100 ಅಂಕಗಳಿಗೆ ಕನಿಷ್ಠ 30 ಅಂಕಗಳನ್ನು ಒಟ್ಟಾರೆ ಶೇ.35 ಅಂಕಗಳನ್ನು ಗಳಿಸಿರಬೇಕು.

(ii) ವಿದ್ಯಾರ್ಥಿಯು ತೇರ್ಗಡೆ ಹೊಂದಲು 625 ಅಂಕಗಳಿಗೆ ಕನಿಷ್ಠ 219 ಅಂಕ ಪಡೆದಿರಬೇಕು. (ಶೇ.35) ವಿದ್ಯಾರ್ಥಿಯು ತೇರ್ಗಡೆಗೆ ಪ್ರತಿ ವಿಷಯದಲ್ಲಿ ಶೇ.30 ಅಂಕಗಳನ್ನು ಒಟ್ಟಾರೆ ಶೇ.35 ಅಂಕಗಳನ್ನು ಪಡೆದಿರಬೇಕು.

(iii) ಅನುತ್ತೀರ್ಣ ಪುನರಾವರ್ತಿತ ವಿದ್ಯಾರ್ಥಿಗಳು ತೇರ್ಗಡೆ ಹೊಂದಲು ಪ್ರಥಮ ಭಾಷೆ ಕನ್ನಡ–125 ಅಂಕಗಳಿಗೆ ಕನಿಷ್ಠ–44 ಅಂಕಗಳು ಹಾಗೂ ಇತರೆ ವಿಷಯಗಳಲ್ಲಿ ಕನಿಷ್ಠ 35 ಅಂಕಗಳನ್ನು ಪಡೆದಿರಬೇಕು. ಶೇ.35 ಅಂಕಗಳಿಗಿಂತ ಕಡಿಮೆ ಗಳಿಸಿರುವ ಅಂದರೆ ಪ್ರಥಮ ಭಾಷೆ ಕನ್ನಡ–44 ಅಂಕಗಳಿಗಿಂತ ಕಡಿಮೆ ಮತ್ತು ಇತರೆ ವಿಷಯಗಳಲ್ಲಿ 35 ಅಂಕಗಳಿಗಿಂತ ಕಡಿಮೆ ಅಂಕಗಳನ್ನು ಪಡೆದಿರುವ ವಿಷಯಗಳಿಗೆ ಪುನಃ ಪರೀಕ್ಷೆ ತೆಗೆದುಕೊಳ್ಳಬೇಕಾಗಿರುವುದು ಕಡ್ಡಾಯವಾಗಿದೆ.

## V. ಅಂಕಗಳು ಮತ್ತು ದರ್ಜೆಗಳ ವಿವರ:–

**ಒಟ್ಟು 625 ಅಂಕಗಳಿಗೆ**

| ಕ್ರಮ ಸಂಖ್ಯೆ | ಶೇಕಡ | ದರ್ಜೆ |
|---|---|---|
| 01 | ಶೇಕಡ 85 ಮತ್ತು ಅದಕ್ಕಿಂತ ಮೇಲ್ಪಟ್ಟು | ಡಿಸ್ಟಿಂಕ್ಷನ್ |
| 02 | ಶೇಕಡ 60 ಮತ್ತು ಅದಕ್ಕಿಂತ ಮೇಲ್ಪಟ್ಟು ಮತ್ತು ಶೇಕಡ 85ರೊಳಗೆ | ಪ್ರಥಮ ದರ್ಜೆ |
| 03 | ಶೇಕಡ 50 ಮತ್ತು ಅದಕ್ಕಿಂತ ಮೇಲ್ಪಟ್ಟು ಮತ್ತು ಶೇಕಡ 60ರೊಳಗೆ | ದ್ವಿತೀಯ ದರ್ಜೆ |
| 04 | ಶೇಕಡ 35 ಮತ್ತು ಅದಕ್ಕಿಂತ ಮೇಲ್ಪಟ್ಟು ಮತ್ತು ಶೇಕಡ 49ರೊಳಗೆ | ಉತ್ತೀರ್ಣ |

**ಒಂದೇ ಬಾರಿಗೆ ತೇಗರ್ಡೆಯಾದವರಿಗೆ ಮಾತ್ರ ದರ್ಜೆ ನೀಡಲಾಗುವುದು ಮತ್ತು ಪುನರಾವರ್ತಿತ ವಿದ್ಯಾರ್ಥಿಗಳಿಗೆ ದರ್ಜೆ ನೀಡಲಾಗುವುದಿಲ್ಲ.**

## VI. ಅರ್ಜಿಗಳನ್ನು ಸಲ್ಲಿಸಲು ಕಲಿಕಾ ಕೇಂದ್ರದ ಮುಖ್ಯಸ್ಥರು ಪಾಲಿಸಬೇಕಾದ ಸೂಚನೆಗಳು:

**(ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಭರ್ತಿ ಮಾಡಲು ಅನುಕೂಲವಾಗುವಂತೆ FlowChart ನೀಡಲಾಗುವುದು ಅದನ್ನು ಕಡ್ಡಾಯವಾಗಿ ಓದಿಕೊಳ್ಳುವುದು.)**

1 ಜೂನ್–2021 ಕೆ.ಓ.ಎಸ್ ಮುಖ್ಯ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ನೊಂದಣಿ ಮಾಹಿತಿಯನ್ನು ಮಂಡಳಿಯ ಜಾಲತಾಣ www.sslc.karnataka.gov.in ಇಲ್ಲಿ Login/Other Exams/KOS Examination Login ಮೂಲಕ ಸಂಸ್ಥೆಯ ಲಾಗಿನ್‌ನಲ್ಲಿ ಅಭ್ಯರ್ಥಿಗಳ ಮಾಹಿತಿಗಳನ್ನು Upload ಮಾಡಲು ಸೂಚಿಸಿದೆ.

2 ಹೊಸದಾಗಿ ಪ್ರಾರಂಭವಾಗಿರುವ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ ಕೇಂದ್ರಗಳಿಗೆ ಶಾಲಾ ಸಂಕೇತ ಪಡೆಯಲು ಮಂಡಳಿಗೆ ರೂ.10,000/- ನೋಂದಣಿ ಶುಲ್ಕ NEFT CHALLAN ಮುಖಾಂತರ ನಿಗಧಿತ ದಿನಾಂಕ:15/03/2021ರೊಳಗೆ ಕಡ್ಡಾಯವಾಗಿ ಪಾವತಿಸಿ ಶಾಲಾ ಸಂಕೇತ ಪಡೆಯುವುದು.

3 ಈಗಾಗಲೇ ನೋಂದಾಯಿಸಿರುವ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ ಕೇಂದ್ರಗಳು ನೋಂದಣಿ ನವೀಕರಣಕ್ಕೆ ಶುಲ್ಕ ರೂ.1300/- ಪಾವತಿಸಲು ಸಂಸ್ಥೆಯ ಲಾಗಿನ್‌ನಲ್ಲಿ ಅವಕಾಶ ಕಲ್ಪಿಸಲಾಗುತ್ತದೆ. ಈ ನವೀಕರಣ ಶುಲ್ಕವನ್ನು ಆನ್‌ಲೈನ್ ಮೂಲಕ ಕ್ರೆಡಿಟ್‌ಕಾರ್ಡ್/ಡೆಬಿಟ್‌ಕಾರ್ಡ್/ನೆಟ್‌ಬ್ಯಾಂಕಿಂಗ್ ಮೂಲಕ ಪಾವತಿಸಬಹುದಾಗಿರುತ್ತದೆ. ಅಥವಾ ಲಾಗಿನ್‌ನಲ್ಲಿ ಜನರೇಟ್ ಆದ ಚಲನ್‌ನನ್ನು ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಾವತಿಸಬಹುದಾಗಿರುತ್ತದೆ. ಶುಲ್ಕ ಪಾವತಿಸಿದ ಆನ್‌ಲೈನ್/ಚಲನ್ ಪ್ರತಿಯ ಹಾರ್ಡ್ ಪ್ರತಿಯನ್ನು ಡಯಟ್‌ಗಳಿಗೆ ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಹಾಗೂ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ), ಬೆಂಗಳೂರು ರವರ ಮೂಲಕ ಸಲ್ಲಿಸಬೇಕು. ಡಯಟ್ ಲಾಗಿನ್‌ನಲ್ಲಿ ಅನುಮೋದಿಸಿದ ನಂತರವಷ್ಟೇ ವಿದ್ಯಾರ್ಥಿಗಳ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ.

4 ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಗಳಲ್ಲಿ ತಿದ್ದುಪಡಿಗಳಿದ್ದಲ್ಲಿ ನಿಗಧಿಪಡಿಸಿದ ದಿನಾಂಕದೊಳಗೆ ತಿದ್ದುಪಡಿ ಮಾಡಿಕೊಳ್ಳಲು ಸಂಸ್ಥೆಯ ಲಾಗಿನ್‌ನಲ್ಲಿ Update Application Option ನೀಡಲಾಗಿದೆ. ಡಯಟ್ ಅನುಮೋದನೆಗಿಂತ ಮೊದಲು ತಮ್ಮ ಸಂಸ್ಥೆಯ ಲಾಗಿನ್‌ನಲ್ಲಿ ತಿದ್ದುಪಡಿಗಳನ್ನು ಮಾಡಬಹುದಾಗಿದ್ದು ಡಯಟ್ ಸಂಸ್ಥೆಯವರು ಅನುಮೋದನೆ ಮಾಡಿದ ನಂತರ ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.

5 ತಾತ್ಕಲಿಕ ಪ್ರವೇಶ ಪತ್ರ/ನಾಮಿನಲ್‌ರೋಲ್ ಪ್ರಕಟಿಸಿದ ನಂತರ ಇನ್ನೊಮ್ಮೆ ತಿದ್ದುಪಡಿಗೆ ಅವಕಾಶ ನೀಡಲಾಗುವುದು.

6 ನಿಗಧಿಪಡಿಸಿದ ದಿನಾಂಕದ ನಂತರ ವಿಷಯ ಬದಲಾವಣೆ ಅಥವಾ ಯಾವುದೇ ತಿದ್ದುಪಡಿಗಳಿದ್ದಲ್ಲಿ ಸೂಕ್ತ ದಾಖಲೆಗಳೊಂದಿಗೆ ಮಂಡಳಿಯ ಗಮನಕ್ಕೆ ತಂದು ರೂ.200/- ದಂಡ ಶುಲ್ಕ ಪಾವತಿಸಿ ಸರಿಪಡಿಸಿಕೊಳ್ಳುವುದು.

7 ಪತ್ರ ವ್ಯವಹಾರಕ್ಕೆ ಅನುಕೂಲಕರವಾದ ಅಂಚೆ ವಿಳಾಸ, ಮೊಬೈಲ್ ಪೋನ್ ಸಂಖ್ಯೆ ಹಾಗೂ E-Mail ವಿಳಾಸವನ್ನು ಭರ್ತಿ ಮಾಡಲು ಅವಕಾಶ ನೀಡಲಾಗುತ್ತದೆ.

8 **ಪರೀಕ್ಷಾ ಅರ್ಜಿಗಳನ್ನು ಮಂಡಳಿಯ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಸಲ್ಲಿಸುವ ಸಮಯದಲ್ಲಿ ವಿದ್ಯಾರ್ಥಿಗಳ ನೇರಭಂಗಿಯ ಭಾವಚಿತ್ರ 60 ರಿಂದ 80 KB ಹಾಗೂ ಸಹಿಯನ್ನು 20 ರಿಂದ 50 KB JPEG ನಮೂನೆಯಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯ.**

9 **ಭಾವಚಿತ್ರವನ್ನು ಮಾತ್ರವೇ ಸ್ಕ್ಯಾನ್ ಮಾಡಿಕೊಂಡು ಅಪ್ ಲೋಡ್ ಮಾಡಬೇಕೇ ಹೊರತು ಇಡೀ ಪೇಪರ್ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವಂತಿಲ್ಲ.**

10 ಆನ್‌ಲೈನ್‌ನಲ್ಲಿ ವಿದ್ಯಾರ್ಥಿಯ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡುವಾಗ ನೈಜ ವಿದ್ಯಾರ್ಥಿಯ ಬದಲು ಬೇರೆ ವಿದ್ಯಾರ್ಥಿಯ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡಿದರೆ ಅಂತಹ ಸಂಸ್ಥೆಯ ಮುಖ್ಯಸ್ಥರ/ಸಮನ್ವಯಾಧಿಕಾರಿಗಳ ಮೇಲೆ ನಿಯಮಾನುಸಾರ ಕಠಿಣ ಕ್ರಮ ಜರುಗಿಸಲಾಗುವುದು. ಇಂತಹ ದೋಷಗಳನ್ನು ಪರಿಶೀಲಿಸದೆ, ಖಾತ್ರಿಪಡಿಸಿಕೊಳ್ಳದೆ, ಯಥಾವತ್ತಾಗಿ ಅನುಮೋದಿಸುವ ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಹಾಗೂ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ), ಬೆಂಗಳೂರು ಹಾಗೂ ಜಿಲ್ಲಾ ಡಯಟ್ ಪ್ರಾಂಶುಪಾಲರ ಮೇಲೆ ನಿಯಮಾನುರೀತ್ಯಾ ಕ್ರಮಕೈಗೊಳ್ಳಲಾಗುವುದು.

11 ಕಲಿಕಾ ಕೇಂದ್ರದ ಮುಖ್ಯಸ್ಥರು ಲಾಗಿನ್‌ನಲ್ಲಿ ನಾಮಯಾದಿ ಪಟ್ಟಿಯನ್ನು (Nominal Roll) Down load ಮಾಡಿಕೊಂಡು ಪರಿಶೀಲಿಸಿ ಶುಲ್ಕ ಪಾವತಿಸಿದ ಮೂಲ ಚಲನ್‌ನೊಂದಿಗೆ ಮಂಡಳಿಗೆ ಸಲ್ಲಿಸುವುದು.

12 ಮೇಲಿನ ಎಲ್ಲಾ ನಿಯಮಗಳನ್ನು ಸಂಬಂಧಪಟ್ಟ ಕಲಿಕಾ ಕೇಂದ್ರದ ಮುಖ್ಯಸ್ಥರು ತಪ್ಪದೇ ಪಾಲಿಸಲು ತಿಳಿಸಿದೆ. ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಕಲಿಕಾ ಕೇಂದ್ರದ ಮುಖ್ಯಸ್ಥರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

## VII. ನಾಮಿನಲ್‌ರೋಲ್:-

ಹೊಸ ವಿದ್ಯಾರ್ಥಿಗಳು ಮತ್ತು ಪುನರಾವರ್ತಿತ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ನಾಮಿನಲ್‌ರೋಲ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಸಂಬಂಧಪಟ್ಟ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ಡಯಟ್ ಪ್ರಾಂಶುಪಾಲರಿಗೆ ಸಲ್ಲಿಸುವುದು ಹಾಗೂ ಡಯಟ್ ಹಂತದಲ್ಲಿಯೇ ಸಂರಕ್ಷಿಸಿಡುವುದು ಮಂಡಳಿಯಿಂದ ಕೇಳಿದಾಗ ಅದನ್ನು ಮಂಡಳಿಗೆ ಸಲ್ಲಿಸುವುದು.

## VIII. ಪರೀಕ್ಷಾ ಶುಲ್ಕ:-

1. ಸರ್ಕಾರದ ಆದೇಶ ಸಂಖ್ಯೆ:ಇಡಿ.218.ಎಸ್.ಎಲ್.ಬಿ2016; ದಿನಾಂಕ:14.12.2016ರನ್ವಯ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆಗೆ ಈ ಕೆಳಕಂಡಂತೆ ಶುಲ್ಕ ಪರಿಷ್ಕರಿಸಲಾಗಿದೆ.

| ಕ್ರಮ ಸಂಖ್ಯೆ | ವಿವರ | ಶುಲ್ಕದ ಮೊತ್ತ |
|---|---|---|
| 01 | ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಲ್ಯಾಮಿನೇಷನ್ ಶುಲ್ಕ ಸೇರಿ | 1444/- |
| 02 | ಅನುತ್ತೀರ್ಣ ಪುನರಾವರ್ತಿತ ವಿದ್ಯಾರ್ಥಿಗಳಿಗೆ<br>ಅ) ಒಂದು ವಿಷಯಕ್ಕೆ<br>ಆ) ಎರಡು ವಿಷಯಗಳಿಗೆ<br>ಇ) ಮೂರು ವಿಷಯಗಳಿಗೆ<br>ಈ) ನಾಲ್ಕು ಮತ್ತು ಅದಕ್ಕೂ ಮೇಲ್ಪಟ್ಟ ವಿಷಯಗಳಿಗೆ | 360/-<br>600/-<br>840/-<br>1416/- |

**ಸೂಚನೆ:-** ಅನುತ್ತೀರ್ಣಗೊಂಡ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಇಚ್ಛಿಸಿದಲ್ಲಿ ಅನುತ್ತೀರ್ಣವಾಗಿರುವ ಎಲ್ಲಾ ವಿಷಯಗಳಿಗೂ ನಿಗದಿತ ಶುಲ್ಕವನ್ನು ಆನ್‌ಲೈನ್‌ನಲ್ಲಿ ಪಾವತಿಸುವುದು ಕಡ್ಡಾಯ.

### ಪರೀಕ್ಷಾ ಶುಲ್ಕ ಪಾವತಿಸುವ ವಿಧಾನ

- ಅಭ್ಯರ್ಥಿಗಳ ಪರೀಕ್ಷಾ ಅರ್ಜಿಯನ್ನು ಕಲಿಕಾ ಕೇಂದ್ರದ ಮುಖ್ಯಸ್ಥರು ಮಂಡಳಿಯ ಜಾಲತಾಣದಲ್ಲಿ, ತಮ್ಮ ಸಂಸ್ಥೆಯ Login ಮೂಲಕ Upload ಮಾಡಬೇಕು. ನಿಗದಿಪಡಿಸಿದ ಅವಧಿಯೊಳಗೆ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಸಂಸ್ಥೆವಾರು ಪರೀಕ್ಷಾ ಶುಲ್ಕ ಪಾವತಿಗೆ ಸಂಬಂಧಪಟ್ಟಂತೆ ಆನ್‌ಲೈನ್ ಮೂಲಕ ಕ್ರೆಡಿಟ್‌ಕಾರ್ಡ್/ಡೆಬಿಟ್‌ಕಾರ್ಡ್/ನೆಟ್‌ಬ್ಯಾಂಕಿಂಗ್ ಮೂಲಕ ಹಾಗೂ ಆನ್‌ಲೈನ್‌ನಲ್ಲಿ ಚಲನ್ ಜನರೇಟ್ ಮಾಡುವ ವ್ಯವಸ್ಥೆ ಮಾಡಲಾಗಿದೆ. ಚಲನ್ ಮೂಲಕ ಶುಲ್ಕ ಪಾವತಿಸಲು ಚಲನ್ ಅನ್ನು Login ನಿಂದ ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ನಮೂದಿಸಿರುವ ಮೊತ್ತವನ್ನು ಅದೇ ಚಲನ್ ಬಳಸಿ ನಿಗದಿತ ಅವಧಿಯಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಾವತಿಸುವುದು.
- ಆನ್‌ಲೈನ್ ಚಲನ್ ಹೊರತುಪಡಿಸಿ ಮತ್ಯಾವುದೇ ಚಲನ್, ಡಿ.ಡಿ, ಚೆಕ್ ಮೂಲಕ ಮಾಡಲಾದ ಪಾವತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ. ವಿದ್ಯಾರ್ಥಿಗಳ ಶುಲ್ಕವನ್ನು ನಿಗದಿತ ದಿನಾಂಕದ ನಂತರ ಚಲನ್ ಮೂಲಕ ಪಾವತಿಸಿದಲ್ಲಿ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಹಾಗೂ ಪರೀಕ್ಷಾ ಶುಲ್ಕವನ್ನು ಪಾವತಿಸಿದ್ದರೂ ಸಹ ಹಿಂದಿರುಗಿಸಲಾಗುವುದಿಲ್ಲ.

- ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸುವ ವ್ಯವಸ್ಥೆ ಮಾಡಲಾಗಿದ್ದು, ಆನ್‌ಲೈನ್ ಮೂಲಕ ಪಾವತಿಸಿದಲ್ಲಿ ಪಾವತಿಸಿರುವ ಬಗ್ಗೆ ಆನ್‌ಲೈನ್ ರಶೀದಿಯ ಪ್ರತಿಯನ್ನು ಡಯಟ್ ಪ್ರಾಂಶುಪಾಲರ ಮೂಲಕ ಮಂಡಳಿಗೆ ಸಲ್ಲಿಸುವುದು.
- ಮಂಡಳಿ ನಿಗದಿಪಡಿಸಿದ ಕೊನೆಯ ದಿನಾಂಕಗಳು ಸರ್ಕಾರಿ ರಜಾ ದಿನವೆಂದು ಘೋಷಿಸಿದ್ದಲ್ಲಿ ಆ ದಿನದ ಮಾರನೆಯ ಕೆಲಸದ ದಿನವನ್ನು ಕೊನೆಯ ದಿನವೆಂದು ಪರಿಗಣಿಸಲಾಗುವುದು.

## IX. ಪರೀಕ್ಷೆಗೆ ಸಂಬಂಧಿಸಿದ ಕಾರ್ಯಚಟುವಟಿಕೆಗಳನ್ನು ನಿಗಧಿಗೊಳಿಸಿರುವ ದಿನಾಂಕಗಳ ವಿವರ:-

| ಕ್ರ.ಸಂ | ವಿವರ | ದಿನಾಂಕ: |
|---|---|---|
| 1 | ಅಧಿಸೂಚನೆ ಪ್ರಕಟಿಸುವುದು | 08/02/2021 |
| 2 | ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಪ್ರಾರಂಭ ದಿನಾಂಕ | 01/04/2021 |
| 3 | ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | 15/04/2021 |
| 4 | ದಂಡ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 17/04/2021 |
| 5 | ಜೂನ್-2021 ರ ಕೆ.ಓ.ಎಸ್ ಮುಖ್ಯ ಪರೀಕ್ಷೆಗೆ ಆನ್‌ಲೈನ್ ಚಲನ್ ಡೌನ್‌ಲೋಡ್ ಮಾಡಿಕೊಂಡು ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 19/04/2021 |
| 6 | ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಹಾಗೂ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ), ಬೆಂಗಳೂರು ಸಂಸ್ಥೆಯ ಅಡಿಗಳಲ್ಲಿ ನೋಂದಾಯಿಸಿಕೊಂಡಿರುವ ಕಲಿಕಾ ಕೇಂದ್ರಗಳ ಅಭ್ಯರ್ಥಿಗಳ ನಾಮಿನಲ್ ರೋಲ್, ಶುಲ್ಕ ಪಾವತಿಸಿದ ಮೂಲ ಚಲನ್ ಪ್ರತಿ ಹಾಗೂ ಸಂಭಂಧಿಸಿದ ಇತರೆ ದಾಖಲೆಗಳನ್ನು ಅನುಮೋದಿಸಲು ಕೊನೆಯ ದಿನಾಂಕ | 21/04/2021 |
| 7 | ಡಯಟ್‌ನಿಂದ ಅರ್ಜಿಗಳನ್ನು ಅನುಮೋದಿಸಲು ಕೊನೆಯ ದಿನಾಂಕ | 23/04/2021 |
| 8 | ತಾತ್ಕಾಲಿಕ ಪ್ರವೇಶ ಪತ್ರಗಳನ್ನು ಆನ್‌ಲೈನ್‌ಅಲ್ಲಿ ಪ್ರಕಟಿಸುವ ದಿನಾಂಕ | 19/05/2021 |
| 9 | ಪ್ರವೇಶ ಪತ್ರಗಳಲ್ಲಿನ ದೋಷಗಳನ್ನು ಆನ್‌ಲೈನ್‌ನಲ್ಲಿ ತಿದ್ದುಪಡಿ ಮಾಡಲು ಅಂತಿಮ ದಿನಾಂಕ | 25/05/2021 |
| 10 | ಅಂತಿಮ ಪ್ರವೇಶ ಪತ್ರ ಮತ್ತು ಸಿಎನ್‌ಆರ್ ಗಳನ್ನು ಆನ್‌ಲೈನ್‌ಅಲ್ಲಿ ಪ್ರಕಟಿಸುವ ದಿನಾಂಕ | 01/06/2021 |

## X. ವಿಭಿನ್ನ ಸಾಮರ್ಥ್ಯವುಳ್ಳ (Differently Abled) ಮಕ್ಕಳಿಗೆ ನೀಡುವ ಸೌಲಭ್ಯಗಳು ಮತ್ತು ವಿನಾಯಿತಿ:-

ಭಾರತ ಸರ್ಕಾರದ Ministry of Social Justice and Empowerment Department of Disability Affairs ಸಂಸ್ಥೆಯ ಪತ್ರ ಸಂಖ್ಯೆ: F.NO.16-110/2003-DDIII ದಿನಾಂಕ:26.02.2013 ಹಾಗೂ ಕರ್ನಾಟಕ ಸರ್ಕಾರ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಸುತ್ತೋಲೆ ಸಂಖ್ಯೆ ವಿಹಿನಾಸಿಇ/ಅಧಿನಿಯಮ/07/2012-13; ದಿನಾಂಕ:20.05.2013ರನ್ವಯ ಕೆಳಕಂಡ ಸೌಲಭ್ಯಗಳನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಿದೆ.

1. **ಸರ್ಕಾರದ ಆದೇಶದ ಸಂಖ್ಯೆ:ಮಮ65ಪಿಹೆಚ್‌ಪಿ2000, ಬೆಂಗಳೂರು ದಿನಾಂಕ:10.03.2000 ರನ್ವಯ, ಅಧಿಕೃತ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಸ್ಪಾಸ್ಟಿಕ್/ಕಿವುಡು/ಮೂಗ ಮತ್ತು ಕಲಿಕಾ ನ್ಯೂನತೆ ಹಾಗೂ ಬುದ್ಧಿ ಮಾಂದ್ಯ ವಿದ್ಯಾರ್ಥಿಗಳು ಶಿಕ್ಷಣ ಮಾಧ್ಯಮದ ಭಾಷೆಯ ಒಂದನ್ನು ಮಾತ್ರ ತೆಗೆದುಕೊಳ್ಳಬಹುದು. ಉಳಿದ ಎರಡು ಭಾಷಾ ವಿಷಯಗಳಿಗೆ ವಿನಾಯಿತಿ ಇರುತ್ತದೆ.** ಈ ಬಗ್ಗೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಂದ ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಅನುಮತಿ ಪಡೆದುಕೊಂಡು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ತಿಳಿಸಿದೆ. ಈ ಮಾಹಿತಿಯನ್ನು ಸಂಬಂಧಿಸಿದ ಡಯಟ್ ಪ್ರಾಂಶುಪಾಲರು **ಸೂಕ್ತ ದಾಖಲೆಗಳಾದ ವೈದ್ಯಕೀಯ ಪ್ರಮಾಣಪತ್ರಗಳನ್ನು ಪರಿಶೀಲಿಸಿ ಆನ್‌ಲೈನ್‌ನಲ್ಲಿ ಅನುಮೋದಿಸುವುದು.**
2. ಭಾಷಾ ವಿನಾಯಿತಿಗಳ ಪ್ರಸ್ತಾವನೆಗಳನ್ನು ಜಿಲ್ಲಾ ಉಪನಿರ್ದೇಶಕರು ಕೂಲಂಕಷವಾಗಿ ಪರಿಶೀಲಿಸಿ ವಿನಾಯಿತಿ ನೀಡುವ ಭಾಷಾ ವಿಷಯ ಮತ್ತು ವಿಷಯ ಸಂಕೇತಗಳನ್ನು ವಿವರಿಸಿರಬೇಕು. ವಿಕಲಚೇತನ (Physical Challenged) ಮತ್ತು ಅಂಧ ವಿದ್ಯಾರ್ಥಿಗಳಿಗೆ (Blind) ಭಾಷಾ ವಿನಾಯಿತಿ ನೀಡಲು ಅವಕಾಶವಿರುವುದಿಲ್ಲ. ಇದನ್ನು ಹೊರತುಪಡಿಸಿ ಉಳಿದಂತೆ ನೀಡುವ ಸೌಲಭ್ಯಗಳನ್ನು ವಿವರಿಸಿದ್ದು, ಅದರಂತೆ ಕ್ರಮವಹಿಸುವುದು.
3. ವಿಕಲಚೇತನ ಮಕ್ಕಳು ಬರಹಗಾರರ/ಓದುಗಾರರ ಸಹಾಯಕರ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ. ಬರಹಗಾರರ/ಓದುಗಾರರ ಆಯ್ಕೆ ಮಾಡಿಕೊಳ್ಳುವುದು ವಿದ್ಯಾರ್ಥಿಗಳ ವಿವೇಚನೆಗೆ ಬಿಟ್ಟಿದ್ದು, ಅವರಿಗೆ ಯಾವುದೇ ವಿದ್ಯಾರ್ಹತೆ ಮತ್ತು ವಯೋಮಿತಿಯನ್ನು ನಿಗಧಿಪಡಿಸುವಂತಿಲ್ಲ. ಬರಹಗಾರರ/ಓದುಗಾರರ ಸಹಾಯಕರನ್ನು ಮಧ್ಯದಲ್ಲಿ ಬದಲಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.
4. ವಿಕಲಚೇತನ ಮಕ್ಕಳಿಗೆ 3–00 ಘಂಟೆ ಅವಧಿಯ ಪರೀಕ್ಷೆಗೆ 1–00 ಘಂಟೆ "ಪರಿಹಾರ ಅವಧಿ" (Compensatory time) ಎಂಬುದಾಗಿ ಪರಿಗಣಿಸುವುದು. ಸದರಿ ವಿದ್ಯಾರ್ಥಿಗಳಿಗೆ ಸೂಕ್ತ ಆಸನ ವ್ಯವಸ್ಥೆಯನ್ನು ನೆಲಮಹಡಿಯಲ್ಲಿರುವಂತೆ ಮಾಡುವುದು.
5. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ.142.ಯೋಯೋಕ.2009 ದಿನಾಂಕ:16.07.2009ರನ್ವಯ ಕಲಿಕಾ ನ್ಯೂನತೆ ಹೊಂದಿರುವ ವಿದ್ಯಾರ್ಥಿಗಳು ನಿಮ್ಹಾನ್ಸ್/ಅಖಿಲ ಭಾರತ ದೃಕ್–ಶ್ರವಣ ಸಂಸ್ಥೆ ಮೈಸೂರು/ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯಾವುದೇ ಮನಃಶಾಸ್ತ್ರಜ್ಞರು/ಕನಿಷ್ಠ ಎಂ.ಫಿಲ್ ವಿದ್ಯಾರ್ಹತೆ ಹೊಂದಿರುವ ಕ್ಲಿನಿಕಲ್ ಮನಃಶಾಸ್ತ್ರಜ್ಞರು ನೀಡಿರುವ ಪ್ರಮಾಣ ಪತ್ರಕ್ಕೆ ಜಿಲ್ಲಾ ಸರ್ಜನ್ ಶ್ರೇಣಿಗಿಂತಲೂ ಕಡಿಮೆ ಇಲ್ಲದ ಸರ್ಕಾರಿ ವೈದ್ಯರಿಂದ ದೃಢೀಕರಣ ಅಥವಾ ಮಲ್ಲೇಶ್ವರಂ, ಡಿಸ್‌ಲೆಕ್ಸಿಯಾ ಅಸೋಸಿಯೇಷನ್ (ರಿ), ಬೆಂಗಳೂರು ಅಥವಾ ಭಾರತ ದೇಶದ ಯಾವುದೆ ಭಾಗದಿಂದ ಅಧಿಕೃತ ಜಿಲ್ಲಾ ಸರ್ಜನ್‌ಗಿಂತಲೂ ಕಡಿಮೆ ಇಲ್ಲದ ವೈದ್ಯರಿಂದ ಪಡೆದ ಪ್ರಮಾಣ ಪತ್ರದ ಪ್ರತಿಯನ್ನು ಓ.ಎಂ.ಆರ್‌ನೊಂದಿಗೆ ಸಲ್ಲಿಸುವುದು ಕಡ್ಡಾಯ. ತದನಂತರ ವಿನಾಯಿತಿ ಕೋರಿ ಬರುವ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ. ಈ ಬಗ್ಗೆ ವಿನಾಯಿತಿ ಪಡೆದುಕೊಳ್ಳಲು ಆಯಾ ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು, ಪೂರ್ವಭಾವಿ ಕ್ರಮವಹಿಸಿ ಅಂತಹ ವಿದ್ಯಾರ್ಥಿಗಳಿಗೆ ಸದರಿ ಸೌಲಭ್ಯ ಒದಗಿಸಲು ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಹಾಗೂ ಭಾರತ್ ಇನ್ಸ್ಟಿಟ್ಯೂಟ್ ಆಫ್ ಲರ್ನಿಂಗ್ ಸ್ಕೂಲ್, ಬೆಂಗಳೂರು ಇವರ ಮುಖಾಂತರ ಮಂಡಳಿಗೆ ಪ್ರಸ್ತಾವನೆ ಸಲ್ಲಿಸುವುದು.
6. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ142ಯೋಯೋಕಾ 2008 ದಿನಾಂಕ:21.02.2009ರ ಅನ್ವಯ, ಕರ್ನಾಟಕ ಮುಕ್ತ ಶಾಲೆ–ಕೆ.ಓ.ಎಸ್ ವಿದ್ಯಾರ್ಥಿಗಳಲ್ಲಿ ಕಲಿಕಾ ನ್ಯೂನತೆ ಹೊಂದಿರುವ ವಿದ್ಯಾರ್ಥಿಗಳಿಗೆ (ಎಸ್.ಎಸ್.ಎಲ್.ಸಿ ಪರೀಕ್ಷೆಯಂತೆ) ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ.

    1. ಪರೀಕ್ಷಾ ಸಂದರ್ಭದಲ್ಲಿ ಸರಳ ಕ್ಯಾಲುಕ್ಯಲೇಟರ್ ಉಪಯೋಗಿಸಲು ಅನುಮತಿಸಲಾಗಿದೆ.
    2. ಈ ಮಕ್ಕಳಿಗೆ ಪ್ರಶ್ನೆಗಳನ್ನು ಓದಲು ಪೋಷಕರ ವೆಚ್ಚದಲ್ಲಿ ಸಹಾಯಕರನ್ನು ಪಡೆಯಲು ಅನುಮತಿಸಿದೆ.

**XI. ವಿಭಿನ್ನ ಸಾಮರ್ಥ್ಯವುಳ್ಳ (Differently Abled) ಮಕ್ಕಳಿಗೆ ನೀಡಬಹುದಾದ ವಿಶೇಷ ಸೌಲಭ್ಯದ ವಿವರಗಳನ್ನು ಕೆಳಕಂಡಂತೆ ವಿವರಿಸಲಾಗಿದೆ.**

| ನ್ಯೂನತೆ | ಸೌಲಭ್ಯಗಳು/ವಿನಾಯಿತಿಗಳು |
|---|---|
| ಕಿವುಡ ಮತ್ತು ಮೂಗ<br>Deaf & Dumb<br>Hearing Impaired | **2.** ಶಿಕ್ಷಣದ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬಹುದು. ಉಳಿದ ಎರಡು ಭಾಷೆಗಳಿಗೆ ವಿನಾಯಿತಿಯಿರುತ್ತದೆ.<br>**3.** ಹೆಚ್ಚುವರಿ ಸಮಯ ನೀಡುವ ಸೌಲಭ್ಯವಿರುತ್ತದೆ. |
| ಕಲಿಕಾ ನ್ಯೂನತೆ/ಡಿಸ್‌ಲೆಕ್ಸಿಯಾ (Dyslexia)<br>Specific learning disability (SLD) | • ಶಿಕ್ಷಣ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬಹುದು. ಉಳಿದ ಎರಡು ಭಾಷೆಗಳಿಗೆ ವಿನಾಯಿತಿ ಇರುತ್ತದೆ.<br>• ಗಣಿತ ಹಾಗೂ ವಿಜ್ಞಾನ ವಿಷಯಗಳ ಬದಲು ಅರ್ಥಶಾಸ್ತ್ರ, ಗೃಹವಿಜ್ಞಾನ, ವಾಣಿಜ್ಯ ಅಧ್ಯಯನ ವಿಷಯಗಳಲ್ಲಿ ಯಾವುದಾದರೂ ಎರಡು ವಿಷಯಗಳನ್ನು ಸಮಾಜ ವಿಜ್ಞಾನ ವಿಷಯದ ಜೊತೆಗೆ ಆಯ್ಕೆ ಮಾಡಿಕೊಳ್ಳಬಹುದು.<br>• ಪ್ರಶ್ನೆಗಳನ್ನು ಓದಲು ಪೋಷಕರ ವೆಚ್ಚದಲ್ಲಿಯೇ ಸಹಾಯಕರನ್ನು ಪಡೆದುಕೊಳ್ಳಲು ಅವಕಾಶವಿರುವುದು.<br>• ಇಂತಹ ಮಕ್ಕಳು ಮಾಡುವ ಸಣ್ಣಪುಟ್ಟ ದೋಷಗಳನ್ನು ಮೌಲ್ಯಮಾಪನದಲ್ಲಿ ಪರಿಗಣಿಸುವುದಿಲ್ಲ.<br>• ಪರೀಕ್ಷಾ ಸಂದರ್ಭದಲ್ಲಿ ಸರಳ ಕ್ಯಾಲುಕ್ಯುಲೇಟರ್ ಉಪಯೋಗಿಸಲು ಅನುಮತಿಸಲಾಗಿದೆ.<br>• ಹೆಚ್ಚುವರಿ ಸಮಯ ನೀಡುವ ಸೌಲಭ್ಯವಿರುತ್ತದೆ. |
| ಬುದ್ಧಿಮಾಂದ್ಯ<br>Mentally Challenged (MR) | • ಶಿಕ್ಷಣ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬಹುದು. ಉಳಿದ ಎರಡು ಭಾಷೆಗಳಿಗೆ ವಿನಾಯಿತಿಯಿರುತ್ತದೆ. |
| ಅಂಧ ವಿದ್ಯಾರ್ಥಿಗಳು/ದೃಷ್ಟಿಮಾಂದ್ಯ ವಿದ್ಯಾರ್ಥಿ/ಕ್ಷೀಣದೃಷ್ಟಿ (Low Vision) | • ಗಣಿತ ಹಾಗೂ ವಿಜ್ಞಾನ ವಿಷಯಗಳ ಬದಲು ಅರ್ಥಶಾಸ್ತ್ರ, ಗೃಹವಿಜ್ಞಾನ, ವಾಣಿಜ್ಯ ಅಧ್ಯಯನ ವಿಷಯಗಳಲ್ಲಿ ಯಾವುದಾದರೂ ಎರಡು ವಿಷಯಗಳನ್ನು ಸಮಾಜ ವಿಜ್ಞಾನ ವಿಷಯದ ಜೊತೆಗೆ ಆಯ್ಕೆ ಮಾಡಿಕೊಳ್ಳಬಹುದು.<br>• ಬರಹಗಾರರ ಸೌಲಭ್ಯ ನೀಡಲಾಗುವುದು.<br>• ಹೆಚ್ಚುವರಿ ಸಮಯ ನೀಡುವ ಸೌಲಭ್ಯವಿರುತ್ತದೆ. |
| ಮೆದುಳಿನ ಪಾರ್ಶ್ವವಾಯು, ಬಲತೋಳಿನ ಮತ್ತು ಬಲಗೈನ ಕೆಳತುದಿಯು ಸರಿಯಾಗಿ ಬೆಳವಣಿಗೆಯನ್ನು ಹೊಂದದೆ ಇರುವುದು, ಬಲಗೈ ಇದ್ದ ವ್ಯಕ್ತಿಯು ದಿನನಿತ್ಯದ ಕಾರ್ಯಗಳಿಗೆ ಬಲಗೈಯನ್ನೇ ಬಳಸುತ್ತಿದ್ದು, ಎಡಗೈಯಲ್ಲಿ ಬರೆಯುವ್ಯದರಿಂದ ಬರವಣಿಗೆ ನಿಧಾನವಾಗುತ್ತದೆ ಎನ್ನುವವರಿಗೆ | • ಹೆಚ್ಚುವರಿ ಸಮಯ ನೀಡುವ ಸೌಲಭ್ಯ:-<br>• 2.30 ಹಾಗೂ 3.00 ಗಂಟೆಗಳ ಅವಧಿಯ ಪ್ರಶ್ನೆಪತ್ರಿಕೆಗೆ ಒಂದು ಗಂಟೆ.<br>• 2.00 ಗಂಟೆಗಳ ಅವಧಿಯ ಪ್ರಶ್ನೆಪತ್ರಿಕೆಗೆ 45 ನಿಮಿಷಗಳು.<br>• ಒಂದು ಗಂಟೆಯ ಅವಧಿಯ ಪ್ರಶ್ನೆಪತ್ರಿಕೆಗೆ 30 ನಿಮಿಷಗಳು. |
| ಎಲ್ಲಾ ರೀತಿಯ ನ್ಯೂನ್ಯತೆ | • ವಿದ್ಯಾರ್ಥಿಗಳು ಸುಗಮವಾಗಿ ಪರೀಕ್ಷೆ ಬರೆಯಲು ನೆಲಮಹಡಿಯು ಸೂಕ್ತ ಆಸನ ವ್ಯವಸ್ಥೆ ಮಾಡುವುದು. |

**ಪರೀಕ್ಷಾ ಸಮಯದಲ್ಲಿ ಸೆರೆಬ್ರಲ್‌ಪಾಲ್ಸಿ, ಆರ್ಟಿಸಂ, ಪಾರ್ಶ್ವವಾಯು, ಕುಷ್ಠರೋಗ ಹಾಗೂ ವಿವಿಧ ಇತರೆ ನ್ಯೂನತೆಯಿರುವ ವಿದ್ಯಾರ್ಥಿ ಸೌಲಭ್ಯ ಪಡೆಯಲು ಅಪೇಕ್ಷಿಸಿದರೆ ಸೂಕ್ತ ವೈದ್ಯಕೀಯ ದಾಖಲೆಗಳನ್ನು ಪರಿಶೀಲಿಸಿ, ನಿಯಮಾನುಸಾರ ಹೆಚ್ಚುವರಿ ಸಮಯ ಬರಹಗಾರರ, ಓದುಗಾರರ ಸೌಲಭ್ಯ ನೀಡುವ ಅಧಿಕಾರ ಸಂಬಂಧಿಸಿದ ಡಯಟ್ ಪ್ರಾಂಶುಪಾಲರಿಗೆ ಇರುತ್ತದೆ.**

## XII. <u>ಅನುತ್ತೀರ್ಣ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಪ್ರಯತ್ನಗಳ ಮಿತಿ ನಿಗಧಿಗೊಳಿಸುವ ಬಗ್ಗೆ:-</u>

ಸರ್ಕಾರದ ಆದೇಶ ಸಂಖ್ಯೆ:ಇಡಿ.209.ಎಸ್.ಎಲ್.ಬಿ2013; ದಿನಾಂಕ:06.12.2014ರನ್ವಯ ಮಾರ್ಚ್ 2015ರ ಪರೀಕ್ಷೆಯಿಂದ ಜಾರಿಗೆ ಬರುವಂತೆ, ಕರ್ನಾಟಕ ಮುಕ್ತ ಶಾಲೆಯ-ಕೆ.ಓ.ಎಸ್ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಯ ಪ್ರಥಮ ಬಾರಿಗೆ ತೆಗೆದುಕೊಂಡಿರುವ ಪರೀಕ್ಷೆಯೂ ಸೇರಿದಂತೆ ಆರು ಸತತ ಪ್ರಯತ್ನಗಳಲ್ಲಿ ತೇರ್ಗಡೆ ಹೊಂದಬೇಕು ಎಂದು ಪ್ರಯತ್ನಗಳ ಮಿತಿಯನ್ನು ನಿಗಧಿಪಡಿಸಿ ಆದೇಶಿಸಿದೆ. ಸದರಿ ವಿದ್ಯಾರ್ಥಿಗೆ ಸರ್ಕಾರ ಒದಗಿಸಿರುವ ಆರು ಸತತ ಪ್ರಯತ್ನಗಳಲ್ಲಿ ವಿದ್ಯಾರ್ಥಿಯು ಸ್ವಕಾರಣಗಳಿಂದ ಯಾವುದಾದರೂ ಪರೀಕ್ಷೆ ತೆಗೆದುಕೊಳ್ಳದೇ ಇದ್ದಲ್ಲಿ ಆ ಪರೀಕ್ಷೆಯನ್ನು ಕೂಡ ಒಂದು ಪ್ರಯತ್ನ (Attempt) ಎಂದು ಗಣನೆಗೆ ತೆಗೆದುಕೊಳ್ಳಲಾಗುವುದು.

**ಮೇಲ್ಕಂಡ ಸರ್ಕಾರದ ಆದೇಶದಂತೆ, ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಆರು ಪ್ರಯತ್ನಗಳ ಮಿತಿ ಅನ್ವಯಿಸಬೇಕಾಗಿರುವ ವಿವರ.**

| **ಕ್ರಮ ಸಂಖ್ಯೆ** | **ವಿದ್ಯಾರ್ಥಿಯು ಪ್ರಥಮ ಬಾರಿಗೆ ಪರೀಕ್ಷೆ ತೆಗೆದುಕೊಂಡಿರುವ ವರ್ಷ** | **ಆರು ಪ್ರಯತ್ನಗಳ ಮಿತಿಗೆ ಒಳಪಡುವ ವಿದ್ಯಾರ್ಥಿಗಳು ಮತ್ತು ವರ್ಷ** |
|---|---|---|
| 01 | ಪ್ರಥಮ ಬಾರಿಗೆ ಮಾರ್ಚ್ 2018 ಮತ್ತು ಅದಕ್ಕಿಂತ ಹಿಂದಿನ ಸಾಲಿನಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳು ಅನುತ್ತೀರ್ಣ ಹೊಂದಿದ್ದಲ್ಲಿ | ಇಂತಹ ವಿದ್ಯಾರ್ಥಿಗಳ ಆರು ಪ್ರಯತ್ನಗಳು ಅಂತಿಮ ಗೊಂಡಿರುತ್ತದೆ. ಅಂತಹ ವಿದ್ಯಾರ್ಥಿಗಳು, ಪುನಃ ಪರೀಕ್ಷೆ ಬರೆಯಲು ಬಯಸಿದಲ್ಲಿ ಹೊಸದಾಗಿ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ **ಕಲಿಕಾ ಕೇಂದ್ರಗಳಿಗೆ ದಾಖಲಾತಿಯಾಗಿ ಎಲ್ಲಾ 06 ವಿಷಯಗಳಿಗೂ ಪರೀಕ್ಷೆ ತೆಗೆದುಕೊಳ್ಳಬೇಕಾಗಿರುತ್ತದೆ.** |
| 02 | ಪ್ರಥಮ ಬಾರಿಗೆ ಮಾರ್ಚ್ 2019ರಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳು ಅನುತ್ತೀರ್ಣ ಹೊಂದಿದ್ದಲ್ಲಿ | ಜೂನ್ 2021ರ ಪರೀಕ್ಷೆಗೆ ಆರು ಪ್ರಯತ್ನಗಳ ಅಂತಿಮ ಪ್ರಯತ್ನವಾಗಿರುತ್ತದೆ. |

ಮೇಲೆ ವಿವರಿಸಿದಂತೆ, ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳು ನಿಗಧಿಪಡಿಸಲಾದ ಅವಧಿಯಲ್ಲಿ ಪರೀಕ್ಷೆ ಬರೆದು ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಿಲ್ಲದಿದ್ದಲ್ಲಿ ವಿದ್ಯಾರ್ಥಿಯು ತೇರ್ಗಡೆ ಹೊಂದಿದ ವಿಷಯಗಳು ಸಹ ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ಅಂತಹ ವಿದ್ಯಾರ್ಥಿಗಳು ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆ ತೆಗೆದುಕೊಳ್ಳಲು ಅಪೇಕ್ಷಿಸಿದಲ್ಲಿ ಪುನಃ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ ಕೇಂದ್ರಗಳಿಗೆ ಹೊಸದಾಗಿ ದಾಖಲಾತಿಯಾಗಿ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಎಲ್ಲಾ ವಿಷಯಗಳಿಗೆ ಹೊಸದಾಗಿ ಪರೀಕ್ಷೆಯನ್ನು ತೆಗೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ.

## XIII. <u>ಫಲಿತಾಂಶ ಉತ್ತಮ ಪಡಿಸಿಕೊಳ್ಳುವಿಕೆ.</u>

1. ಮಂಡಳಿಯ ನಿಯಮದಂತೆ, ಎಸ್.ಎಸ್.ಎಲ್.ಸಿ ಪರೀಕ್ಷೆಯಂತೆ, ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಪರೀಕ್ಷೆಗೆ ಹಾಜರಾಗಿ ನಿರೀಕ್ಷಿಸಿದ ಫಲಿತಾಂಶ ಬಾರದಿದ್ದ ಸಂದರ್ಭಗಳಲ್ಲಿ, ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಸೌಲಭ್ಯ ಬಯಸುವ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ವಿದ್ಯಾರ್ಥಿಗಳು ಕರ್ನಾಟಕ ಮುಕ್ತ

ಶಾಲೆ–ಕೆ.ಓ.ಎಸ್ ಪರೀಕ್ಷೆಯನ್ನು ಮೊದಲನೇ ಬಾರಿ ಎಲ್ಲಾ ವಿಷಯಗಳಲ್ಲಿ ತೇರ್ಗಡೆ ಹೊಂದಿದ್ದು, ತೇರ್ಗಡೆಯಾದ ಎರಡು ವರ್ಷಗಳ ಅವಧಿಯಲ್ಲಿ ಯಾವುದಾದರೂ ವಿಷಯ ಅಥವಾ ಎಲ್ಲಾ ವಿಷಯಗಳಲ್ಲಿ ಫಲಿತಾಂಶ ಉತ್ತಮಪಡಿಸಿಕೊಳ್ಳಬಹುದಾಗಿದೆ. ತೇರ್ಗಡೆಯಾದ ವಿದ್ಯಾರ್ಥಿಗಳು ಮರು ಪ್ರಯತ್ನದಲ್ಲಿ ಮೊದಲನೆ ಪ್ರಯತ್ನದಲ್ಲಿನ ಅಂಕಗಳಿಗಿಂತ ಕಡಿಮೆ ಅಂಕಗಳಿಸಿದಲ್ಲಿ ಮೊದಲನೆ ಪ್ರಯತ್ನದಲ್ಲಿ ಗಳಿಸಿರುವ ಅಂಕಗಳನ್ನು ಉಳಿಸಿಕೊಳ್ಳಬಹುದಾಗಿದೆ. ಈ ರೀತಿ ಫಲಿತಾಂಶ ಉತ್ತಮಪಡಿಸಲು ಬರೆಯುವ ಪರೀಕ್ಷೆಗಳಿಗೆ ಅನುತ್ತೀರ್ಣ ವಿದ್ಯಾರ್ಥಿಗಳಿಗೆ ನಿಗಧಿಪಡಿಸಲಾದ ಶುಲ್ಕಗಳು ಅನ್ವಯಿಸುತ್ತವೆ.

2. <u>ಅನುಸರಿಸಬೇಕಾದ ಕ್ರಮಗಳು:–</u>

- ಫಲಿತಾಂಶ ಉತ್ತಮಪಡಿಸಿಕೊಳ್ಳಲು ಬಿಳಿ ಹಾಳೆಯಲ್ಲಿ ಅರ್ಜಿ ಬರೆದು ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ದೃಢೀಕರಿಸಿ, ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ರವರ ಮುಖಾಂತರ ಮಂಡಳಿಗೆ ನಿಗದಿತ ಶುಲ್ಕ ರೂ.175/– ಪಾವತಿಸಿ ಮತ್ತು ಮೂಲ ಅಂಕಪಟ್ಟಿಯೊಂದಿಗೆ ಆನ್‌ನಲ್ಲಿ ಅರ್ಜಿ ಸಲ್ಲಿಸಬೇಕು.
- ಮಂಡಳಿಯಿಂದ ಅನುಮತಿ ಪಡೆದ ನಂತರ ಅನುಮತಿ ಪತ್ರದೊಂದಿಗೆ ಪರೀಕ್ಷಾ ಶುಲ್ಕ ಪಾವತಿಸಬೇಕು.
- ಹಿಂದೆ ವ್ಯಾಸಂಗ ಮಾಡಿದ ಕಲಿಕಾ ಕೇಂದ್ರಗಳಿಂದಲೇ ಪರೀಕ್ಷಾ ಶುಲ್ಕ ಪಾವತಿಸಬೇಕು ಈ ಕಲಿಕಾ ಕೇಂದ್ರಕ್ಕೆ ನಿಗಧಿಪಡಿಸಿದ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆಗೆ ಕುಳಿತುಕೊಳ್ಳಬೇಕು. ಪರೀಕ್ಷಾ ಕೇಂದ್ರ ಬದಲಾವಣೆಗೆ ಅವಕಾಶವಿರುವುದಿಲ್ಲ. ಒಂದು ವೇಳೆ ಆ ಪರೀಕ್ಷಾ ಕೇಂದ್ರದಲ್ಲಿ ಅಗತ್ಯ ಸಂಖ್ಯೆಯ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಮಂಡಳಿಯಿಂದ ಹಂಚಿಕೆ ಮಾಡಲಾದ ಕೇಂದ್ರದಲ್ಲಿ ಪರೀಕ್ಷೆ ಬರೆಯಬೇಕಾಗುತ್ತದೆ.
- ತಾನು ಯಾವುದೇ ಉನ್ನತ ವ್ಯಾಸಂಗವನ್ನು ಮುಂದುವರೆಸಿಲ್ಲ ಅಥವಾ ಉದ್ಯೋಗಕ್ಕೆ ಸೇರಿರುವುದಿಲ್ಲ ಎಂಬ ಬಗ್ಗೆ ಮುಚ್ಚಳಿಕೆ ಪತ್ರ ಸಲ್ಲಿಸುವುದು.
- ಪ್ರಯತ್ನದ ಪರೀಕ್ಷೆಯಲ್ಲಿ ಫಲಿತಾಂಶ ಉತ್ತಮವಾಗದಿದ್ದ ಪಕ್ಷದಲ್ಲಿ ಹಿಂದಿನ ಫಲಿತಾಂಶವನ್ನೇ ಉಳಿಸಿಕೊಳ್ಳಬಹುದು.

## XIV. <u>ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಹಾಗೂ ನಿರ್ದೇಶಕರು, ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ), ಬೆಂಗಳೂರು ಇವರು ಪಾಲಿಸಬೇಕಾದ ಸೂಚನೆಗಳು.</u>

1. ಮಾರ್ಚ್ 01/03/2021ಕ್ಕೆ 15 ವರ್ಷಗಳ ವಯೋಮಿತಿ ಪೂರ್ಣಗೊಂಡಿರುವ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಮಾತ್ರ ಅನುಮೋದಿಸಬೇಕು. ಇಲ್ಲವಾದಲ್ಲಿ ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ ಹಾಗು ಭಾರತ್ ಇನ್ಸ್ಟಿಟ್ಯೂಟ್ ಆಫ್ ಲರ್ನಿಂಗ್, ಬೆಂಗಳೂರುರವರ ಹಂತದಲ್ಲೇ ತಿರಸ್ಕರಿಸುವುದು. ಉದಾ:– ಜೂನ್ 2021ಕ್ಕೆ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು 01.03.2006ಕ್ಕಿಂತ ಮೊದಲು ಜನಿಸಿರಬೇಕು.
2. ವಿದ್ಯಾರ್ಥಿಯ ದಾಖಲಾತಿಯನ್ನು, 7ನೇ ತರಗತಿಯ ಮೂಲ ವರ್ಗಾವಣೆಯ ಪ್ರಮಾಣ ಪತ್ರದಲ್ಲಿರುವಂತೆ ವಿದ್ಯಾರ್ಥಿಯ ಹೆಸರು, ತಂದೆಯ ಹೆಸರು, ತಾಯಿಯ ಹೆಸರು, ಜನ್ಮದಿನಾಂಕ ಇವುಗಳನ್ನು ಕಡ್ಡಾಯವಾಗಿ ಪರಿಶೀಲಿಸುವುದು. ಒಂದು ವೇಳೆ ತಪ್ಪಿದ್ದಲ್ಲಿ ಸರಿಪಡಿಸಿ ದೃಢೀಕರಿಸುವುದು. ಸದರಿ ಮಾಹಿತಿಯನ್ನು ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ ಹಾಗೂ ನಿರ್ದೇಶಕರು, ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ), ಬೆಂಗಳೂರು ಮತ್ತು ಕಲಿಕಾ ಕೇಂದ್ರಗಳಲ್ಲಿ ಸುರಕ್ಷಿತವಾಗಿಡತಕ್ಕದ್ದು. ನಾಮಿನಲ್‌ರೋಲ್‌ಗಳನ್ನು ತಪ್ಪದೇ ಮೇಲು ಸಹಿ ಮಾಡಿ ಮಂಡಳಿಗೆ ಸಲ್ಲಿಸುವುದು.

3. ವಿದ್ಯಾರ್ಥಿಯ ದಾಖಲಾತಿ ಹಾಗೂ ಕಲಿಕಾ ಕೇಂದ್ರದ ನೋಂದಣಿ ಬಗೆಗಿನ ಎಲ್ಲಾ ಮಾಹಿತಿಗಳು, ನಾಮಿನಲ್‌ರೋಲ್ ಹಾಗೂ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಆನ್‌ಲೈನ್‌ನಲ್ಲಿ ಲಭ್ಯ ಮಾಡಲಾದ NEFT CHALLAN /Online Payment ಮೂಲಕ ಪಾವತಿಸಿದ ಚಲನ್ ಪ್ರತಿಯನ್ನು ನಿರ್ದೇಶಕರು, ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯ ಮೈಸೂರು ಹಾಗೂ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ), ಬೆಂಗಳೂರು ರವರೇ ಮಂಡಳಿಗೆ ಡಯಟ್ ಅನುಮೋದನೆಯೊಂದಿಗೆ ಕಳುಹಿಸತಕ್ಕದ್ದು.
4. ಹೊಸದಾಗಿ ಕಲಿಕಾ ಕೇಂದ್ರಗಳಿಗೆ ಶಾಲಾ ಸಂಕೇತ ಪಡೆಯಲು ನೋಂದಣಿ ಶುಲ್ಕ ಮತ್ತು ಎಲ್ಲಾ ಕಲಿಕಾ ಕೇಂದ್ರಗಳಿಂದ ನವೀಕರಣ ಶುಲ್ಕ ಮಂಡಳಿಗೆ ಪಾವತಿಸಿರುವುದನ್ನು ಕಡ್ಡಾಯವಾಗಿ ಪರಿಶೀಲಿಸಬೇಕು. ಇಲ್ಲವಾದಲ್ಲಿ ಅಂತಹ ಕಲಿಕಾ ಕೇಂದ್ರದ ಪರೀಕ್ಷಾ ಅರ್ಜಿ ಮತ್ತು ನಾಮಿನಲ್‌ರೋಲ್‌ಗಳನ್ನು ತಿರಸ್ಕರಿಸುವುದು.
5. ವಿಭಿನ್ನ ಸಾಮರ್ಥ್ಯವುಳ್ಳ (Diffrently Abled) ಮಕ್ಕಳಿಗೆ ನೀಡಬಹುದಾದ ವಿಶೇಷ ಸೌಲಭ್ಯಗಳ ವಿವರಗಳನ್ನು ನೀಡಲಾಗಿದೆ. ಅದರಂತೆ, ಅಂತಹ ವಿದ್ಯಾರ್ಥಿಗಳ ಪ್ರಸ್ತಾವನೆಯನ್ನು ಪರಿಶೀಲಿಸಿ ಸೂಕ್ತ ದಾಖಲೆಗಳೊಂದಿಗೆ ಮಂಡಳಿಗೆ ಸಲ್ಲಿಸುವುದು.
6. ಫಲಿತಾಂಶ ಉತ್ತಮಪಡಿಸಿಕೊಳ್ಳುವ ವಿದ್ಯಾರ್ಥಿಗಳ ಪ್ರಸ್ತಾವನೆಗಳಿದ್ದಲ್ಲಿ ಸಂಬಂಧಪಟ್ಟ ಕಲಿಕಾ ಕೇಂದ್ರಗಳಿಂದ ಪಡೆದು ಮಂಡಳಿಗೆ ಸಲ್ಲಿಸುವುದು.

- ಪುನರಾವರ್ತಿತ ವಿದ್ಯಾರ್ಥಿಗಳ ಪ್ರಯತ್ನಗಳ ಮಿತಿಯನ್ನು ಮೇಲೆ ಸೂಚಿಸಿರುವಂತೆ, ಪರಿಶೀಲಿಸಿ ಅರ್ಹರಿರುವವರ ಅರ್ಜಿಗಳನ್ನು ಮಾತ್ರ ಮಂಡಳಿಗೆ ಕಳುಹಿಸುವುದು. ಪ್ರಯತ್ನಗಳ ಮಿತಿಯು ಮುಕ್ತಾಯವಾಗಿರುವ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಆನ್‌ಲೈನ್ ಅರ್ಜಿ ಸಲ್ಲಿಸದಂತೆ ಕ್ರಮವಹಿಸುವುದು. ಅನರ್ಹ ವಿದ್ಯಾರ್ಥಿಗಳಿದ್ದಲ್ಲಿ ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಹಾಗೂ ಭಾರತ್ ಇನ್ಸ್‌ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ), ಬೆಂಗಳೂರುರವರ ಹಂತದಲ್ಲಿಯೇ ತಿರಸ್ಕರಿಸುವುದು.
- ನಾಮಿನಲ್‌ರೋಲನ್ನು ಕಲಿಕಾ ಕೇಂದ್ರದ ಸಮನ್ವಯಾಧಿಕಾರಿಗಳು ಕಡ್ಡಾಯವಾಗಿ ದೃಢೀಕರಿಸಬೇಕು ಮತ್ತು ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಹಾಗೂ ಭಾರತ್ ಇನ್ಸ್‌ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ), ಬೆಂಗಳೂರುಇವರು ನಾಮಿನಲ್‌ರೋಲ್‌ಗೆ "ಮೇಲು ಸಹಿ" ಮಾಡುವುದು ಕಡ್ಡಾಯವಾಗಿರುತ್ತದೆ.

## XV. ಡಯಟ್ ಪ್ರಾಂಶುಪಾಲರು ಹಾಗೂ ನೋಡಲ್ ಅಧಿಕಾರಿಗಳ ಕರ್ತವ್ಯಗಳು ಹಾಗೂ ಗಮನಿಸಬೇಕಾದ ಅಂಶಗಳು:-

- ಕರ್ನಾಟಕ ಮುಕ್ತ ಶಾಲೆ ಕೆ.ಓ.ಎಸ್ ಕಲಿಕಾ ಕೇಂದ್ರಗಳು ನೋಂದಣಿ ನವೀಕರಣ ಶುಲ್ಕ ರೂ.1000/- ಪಾವತಿಸಿರುವುದನ್ನು ಖಚಿತಪಡಿಸಿಕೊಂಡು ಆನ್‌ಲೈನ್‌ನಲ್ಲಿ ಅನುಮೋದನೆ ಮಾಡಬೇಕು.
- ನವೀಕರಣ ಶುಲ್ಕ ಪಾವತಿಸದೇ ಇರುವ ಕಲಿಕಾ ಕೇಂದ್ರಗಳ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ. ಈಗಾಗಲೇ ಕಲಿಕಾ ಕೇಂದ್ರಗಳು ನೀಡಿರುವ ವಿಳಾಸ ಮತ್ತು ಸ್ಥಳದಲ್ಲಿ ಸಂಸ್ಥೆ ನಡೆಯುತ್ತಿರಬೇಕು. ಯಾವುದೇ ಮಾಹಿತಿ ಮಂಡಳಿಗೆ ನೀಡದೇ ವಿಳಾಸ ಮತ್ತು ಸ್ಥಳ ಬದಲಾವಣೆಗೆ ಅವಕಾಶವಿಲ್ಲ.
- ಕಲಿಕಾ ಕೇಂದ್ರಗಳಿಂದ ನೋಂದಣಿಯಾದ ವಿದ್ಯಾರ್ಥಿಗಳ ದಾಖಲಾತಿಯನ್ನು ಡಯಟ್ ಪ್ರಾಂಶುಪಾಲರು ಅನುಮೋದಿಸಿರಬೇಕು. ಅನುಮೋದಿತ ಪಟ್ಟಿಯಲ್ಲಿನ ವಿದ್ಯಾರ್ಥಿಗಳ ಹೆಸರು ಮಾತ್ರ, ನಾಮಪಟ್ಟಿ (Nominal Roll) ಯಲ್ಲಿರಬೇಕು.

➢ ಜಿಲ್ಲಾ ಡಯಟ್ ಪ್ರಾಂಶುಪಾಲರಿಂದ ದಾಖಲಾತಿ ಅನುಮೋದನೆಯಾಗಿಲ್ಲದೇ ಇರುವ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.

➢ ಡಯಟ್ ಪ್ರಾಂಶುಪಾಲರು ತಮ್ಮ ಜಿಲ್ಲೆಯಲ್ಲಿರುವ ಕಲಿಕಾ ಕೇಂದ್ರಗಳಿಂದ ಸಲ್ಲಿಸಿರುವ ನಾಮಯಾದಿ ಪಟ್ಟಿಯನ್ನು ದೃಢೀಕರಿಸಿ ಮಂಡಳಿಗೆ ಕಳುಹಿಸುವುದು.

➢ ಡಯಟ್ ಹಂತದಲ್ಲಿ ಕಲಿಕಾ ಕೇಂದ್ರಗಳಿಂದ ಸ್ವೀಕರಿಸಲಾದ ನೋಂದಣಿ ಶುಲ್ಕ ಹಾಗೂ ಪರೀಕ್ಷಾ ಶುಲ್ಕದ ಚಲನ್‌ಗಳನ್ನು ಪರಿಶೀಲಿಸಿ ಚಲನ್‌ಗಳನ್ನು ಕ್ರೋಢೀಕರಿಸಿ ಮಂಡಳಿಗೆ ಕಳುಹಿಸುವುದು.

➢ ಅರ್ಜಿ ಸಲ್ಲಿಕೆ ಮುಕ್ತಾಯವಾದ ನಂತರ ಮಂಡಳಿಯ ಹಂತದಲ್ಲಿ ಪರಿಶೀಲಿಸಿ ಸಂಸ್ಥೆಯ Loginಗೆ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು Upload ಮಾಡಲಾಗುವುದು. ಸಂಸ್ಥೆಯ ಮುಖ್ಯಸ್ಥರು ಅದನ್ನು ಡೌನ್‌ಲೋಡ್ ಮಾಡಿಕೊಂಡು ಮಂಡಳಿಯಿಂದ ಸೂಚಿಸಲ್ಪಟ್ಟ ನಿಗದಿತ ದಿನದೊಳಗೆ ದೋಷಗಳಿದ್ದಲ್ಲಿ ಸರಿಪಡಿಸುವುದು.

ಸದರಿ ಪರೀಕ್ಷೆಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಶ್ರೀಮತಿ ಟಿ.ಡಿ.ಶೈಲ, ಸಹಾಯಕ ನಿರ್ದೇಶಕರು, 4ನೇ ಮಹಡಿ, ಕೆ.ಓ.ಎಸ್ ವಿಭಾಗ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003, ಮೊಬೈಲ್ ಸಂಖ್ಯೆ:9480343741 ಸ್ಥಿರ ದೂರವಾಣಿ ಸಂಖ್ಯೆ:080-23460525 ಇವರನ್ನು ಸಂಪರ್ಕಿಸಬಹುದಾಗಿದೆ.

6/2/2021
(ಎಸ್.ಗೀತಾ)
ನಿರ್ದೇಶಕರು
(ಇತರೆ ಪರೀಕ್ಷೆಗಳು)

ಪ್ರತಿಯನ್ನು:

1. ಗೌರವಗಳೊಂದಿಗೆ ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗರಸ್ತೆ, ಬೆಂಗಳೂರುರವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ನಿರ್ದೇಶಕರು, ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯ, ಮೈಸೂರು ಹಾಗೂ ಭಾರತ್ ಇನ್ಸ್‌ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ), ಬೆಂಗಳೂರು ರವರ ಅತಿತುರ್ತು ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ, ಮಂಡಳಿಯು ಸೂಚಿಸಿರುವ ದಿನಾಂಕದಂದೇ ಮಂಡಳಿಗೆ ಎಲ್ಲಾ ದಾಖಲೆಗಳನ್ನು ಡಯಟ್ ಮೂಲಕ ತಪ್ಪದೇ ಸಲ್ಲಿಸಲು ತಿಳಿಸಿದೆ.
3. ರಾಜ್ಯದ ಸಂಬಂಧ ಪಟ್ಟ ಜಿಲ್ಲೆಗಳ ಡಯಟ್, ಪ್ರಾಂಶುಪಾಲರುಗಳಿಗೆ ಕಳುಹಿಸುತ್ತಾ, ನಿಮ್ಮ ಜಿಲ್ಲೆಗಳ ಕಲಿಕಾ ಕೇಂದ್ರಗಳಿಗೆ ಸಂಬಂಧಿಸಿದಂತೆ, ವೇಳಾಪಟ್ಟಿ, ಅಧಿಸೂಚನೆಯನ್ನು ಮಂಡಳಿಯ ಜಾಲತಾಣದಲ್ಲಿ ಲಭ್ಯಮಾಡಲಾಗುವುದು ಸಂಬಂಧಪಟ್ಟ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳು ಡೌನ್‌ಲೋಡ್ ಮಾಡಿಕೊಂಡು ಅದರಂತೆ ಕ್ರಮವಹಿಸಲು ತಿಳಿಸಿದೆ.
4. ರಾಜ್ಯದ ಎಲ್ಲಾ ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್ ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳಿಗೆ ಪ್ರಾಂಶುಪಾಲರು, ಡಯಟ್‌ರವರ ಮುಖಾಂತರ ಅಗತ್ಯ ಮತ್ತು ತುರ್ತು ಕ್ರಮಕ್ಕಾಗಿ ಕಳುಹಿಸಿದೆ.
5. ಕಛೇರಿ ಪ್ರತಿ.